C.R.P.67

Form No.4
(Criminal)
Deposition
Sheets
(R.P.No.57)

# 5ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮಂಡ್ಯ

## ಸ್ಪೆಷಲ್ ಕೇಸ್ ನಂಬರ್‌ಃ 167/2020

**ಚಾ.ಸಾ.–18 ಪ್ರಾ.ಸಾ.–07**

| | |
|---|---|
| **ಸಾಕ್ಷಿದಾರರ ಹೆಸರು** | **ರಿಯಾಜ್ ಪಾಷ** |
| **ತಂದೆಯ ಹೆಸರು** | **ಲೇಟ್ ಖಾದರ್ ಪೀರ್** |
| **ವಯಸ್ಸು** | **38 ವರ್ಷಗಳು** |
| **ಉದ್ಯೋಗ** | **ಸಿ.ಹೆಚ್.ಸಿ – 07, ಹಲಗೂರು ಪೋಲೀಸ್ ಠಾಣೆ** |
| **ವಾಸ** | **ಮಳವಳ್ಳಿ** |

**ದಿನಾಂಕಃ 24.02.2026 ರಂದು ಪ್ರಮಾಣವಚನ ಬೋಧಿಸಲಾಯಿತು**

**ಮುಖ್ಯ ವಿಚಾರಣೆಃ ವಿಶೇಷ ಸರ್ಕಾರಿ ಅಭಿಯೋಜಕರವರಿಂದ**

1. ನಾನು 2014 ರಿಂದ 2021 ರವರಗೆ ಬೆಳಕವಾಡಿ ಪೋಲೀಸ್ ಠಾಣೆಯಲ್ಲಿ ಪೋಲೀಸ್ ಪೇದೆಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ದಿಃ05.09.2019 ರಂದು ಈ ಪ್ರಕರಣದ ಆರೋಪಿಯನ್ನು ಪತ್ತೆ ಹಚ್ಚಿ ಹಾಜರುಪಡಿಸಿಲು ನನಗೆ ಹಾಗೂ ಚಾಸಾ- 16, 17 ರವರನ್ನು ನೇಮಕ ಮಾಡಿ ಕಳುಹಿಸಿದ್ದು ಅದರಂತೆ ಅದೇ ದಿನ ಆರೋಪಿತರನ್ನು ಹುಡುಕಿದರೂ ಸಹಾ ಸಿಗಲಿಲ್ಲ, ನಂತರ ನರಸೀಪುರದಲ್ಲಿ ಗಸ್ತು ಮಾಡಿಕೊಂಡು ಅಲ್ಲಿಯೇ ಉಳಿದುಕೊಂಡಿದ್ದು ಮರುದಿನ ಬೆಳಿಗ್ಗೆ 5.45 ಗಂಟೆಗೆ ನರಸೀಪುರದ ಬಸ್ ನಿಲ್ದಾಣದಲ್ಲಿ ಆರೋಪಿತರನ್ನು ಹುಡುಕುತ್ತಿದ್ದಾಗ 1 ರಿಂದ 4ನೇ ಆರೋಪಿತರು ಅಲ್ಲಿ ಇದ್ದು ಅವರನ್ನು ನಾವು ಸುತ್ತುವರೆದು ಹಿಡಿದು ಅವರೇ ಈ ಪ್ರಕರಣದ ಆರೋಪಿತರನ್ನು ಖಾತ್ರಿ ಪಡಿಸಿಕೊಂಡ ನಂತರ ಅವರನ್ನು ವಶಕ್ಕೆ ಪಡೆದು 7.00 ಗಂಟೆಗೆ ಠಾಣೆಗೆ ಹಾಜರಾಗಿ ತನಿಖಾಧಿಕಾರಿಗಳ ಮುಂದೆ ಆರೋಪಿತರನ್ನು ಚಾಸಾ- 16 ರವರ

ವರದಿಯೊಂದಿಗೆ ಹಾಜರುಪಡಿಸಿರುತ್ತೇವೆ. ಸದರಿ ಆರೋಪಿತರನ್ನು ಗುರುತಿಸಬಲ್ಲೆ. ಸದರಿ ಆರೋಪಿತರು ಈ ದಿನ ನ್ಯಾಯಾಲಯದ ಮುಂದೆ ಹಾಜರಿದ್ದಾರೆ. ಈ ಬಗ್ಗೆ ತನಿಖಾಧಿಕಾರಿಗಳಿಗೆ ಹೇಳಿಕೆ ನೀಡಿರುತ್ತೇನೆ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಟಿ.ಡಿ.ಎಂ. ವಕೀಲರಿಂದ**

3. ನಮ್ಮ ಠಾಣೆಯಲ್ಲಿ ಕರ್ತವ್ಯ ವಿಂಗಡಣೆ ಮಾಡಿರುವ ಬಗ್ಗೆ ಠಾಣಾ ವಹಿಯಲ್ಲಿ ನಮೂದಿಸುತ್ತಾರೆ. ದಿಃ05.09.2019 ರಂದು ನಾನು, ಚಾಸಾ- 16 ಮತ್ತು 17 ರವರು ಆರೋಪಿತರನ್ನು ಪತ್ತೆ ಹಚ್ಚಲು ಹೊರಟಿರುತ್ತೇವೆ. ನಾನು ನನ್ನ ಬೈಕಿನಲ್ಲಿ ಹೋಗಿರುತ್ತೇನೆ. ಚಾಸಾ- 16 ಮತ್ತು 17 ರವರು ಕಾರಿನಲ್ಲಿ ಬಂದಿರುತ್ತಾರೆ. ದಿಃ05.09.2019 ರ ಬೆಳಗಿನ ರೋಲ್ ಕಾಲಿನಲ್ಲಿ ನಮ್ಮನ್ನು ನೇಮಕ ಮಾಡಿದ್ದರು. ಬೆಳಕವಾಡಿ ಪೋಲೀಸ್ ಠಾಣೆಯಿಂದ ನರಸೀಪುರಕ್ಕೆ ಸುಮಾರು 25 ಕಿಮಿ ದೂರ ಇದೆ. ದಿಃ05.09.2019 ರಂದು ಬಿ.ಜಿ.ಪುರ, ಮುಟ್ಟನಹಳ್ಳಿ, ಸರಗೂರು ಹ್ಯಾಂಡ್ ಪೋಸ್ಟ್ ಹತ್ತಿರ ನಾವು ಆರೋಪಿರನ್ನು ಹುಡುಕಾಡಿರುತ್ತೇವೆ. ಆರೋಪಿತರು ಆ ದಿನ ಸಿಗಲಿಲ್ಲ ಎನ್ನುವ ಮಾಹಿತಿಯನ್ನು ಠಾಣಾದಿಕಾರಿಗಳಿಗೆ ನೀಡಿರುತ್ತೇವೆ. ನಾವು ಆ ದಿನ ಠಾಣೆಗೆ ವಾಪಸ್ಸು ಬಂದು ನರಸೀಪುರಕ್ಕೆ ಹೋಗಿರುವುದಿಲ್ಲ, ಅಲ್ಲಿಂದಲೇ ನರಸೀಪುರಕ್ಕೆ ನೇರವಾಗಿ ಹೋಗಿರುತ್ತೇವೆ. ಬೆಳಕವಾಡಿಯಿಂದ ಐನೋರಹುಂಡಿಗೆ ಸುಮಾರು 9 ರಿಂದ 11 ಕಿಮಿ ದೂರ ಇದೆ. ಆರೋಪಿತರು ಐನೋರ ಹುಂಡಿ ಗ್ರಾಮದವರು ಎಂದರೆ 1 ರಿಂದ 3ನೇ ಆರೋಪಿತರು ಐನೋರಹುಂಡಿಯವರು 4ನೇ ಆರೋಪಿ ಬಿ.ಜಿ.ಮೋಳೆ ಗ್ರಾಮದವರು. ನಾನು ತನಿಖಾಧಿಕಾರಿಗಳ ಮುಂದೆ ಹೇಳಿಕೆ ನೀಡುವಾಗ ಆರೋಪಿತರ ಊರಿಗೆ ಹೋಗಿ ತಲಾಷ್ ಮಾಡಿರುವ ಬಗ್ಗೆ ಹೇಳಿರುತ್ತೇನೆ. ನಮ್ಮ ಠಾಣಾದಿಕಾರಿಗಳಿಗೆ ನೀಡಿರುತ್ತೇನೆ ಎನ್ನುವ ಹೇಳಿಕೆಯಲ್ಲಿ ಆರೋಪಿತರ ಊರಿಗೆ ಹೋಗಿ ತಲಾಷ್ ಮಾಡಿರುವ ಬಗ್ಗೆ ಹೇಳಿರುವುದೇ ಇಲ್ಲ ಎಂದರೆ ಸರಿಯಲ್ಲ. ಟಿ.ನರಸೀಪುರದ ಬಸ್ ನಿಲ್ದಾಣದಲ್ಲಿಯೇ ಆ ದಿನ ರಾತ್ರಿ ಉಳಿದುಕೊಂಡಿದ್ದೆವು. ನಮ್ಮನ್ನು ನೋಡಿ ಆರೋಪಿತರು ಓಡಲು ಪ್ರಯತ್ನಪಟ್ಟರು. ಆ ಸಮಯ ಬಸ್ ನಿಲ್ದಾಣದಲ್ಲಿ ಆರೋಪಿತರಲ್ಲದೇ ಸುಮಾರು 15 – 20 ಜನ ದೂರ ದೂರ ನಿಂತಿದ್ದರು.

4. ಆರೋಪಿತರನ್ನು ಪತ್ತೆ ಹಚ್ಚಲು ನಮ್ಮನ್ನು ನೇಮಕಮಾಡಿರುತ್ತಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾವು ಆರೋಪಿತರನ್ನು ಹುಡುಕಲು ಎಲ್ಲಿಗೂ ಹೋಗಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿತರೇ ಠಾಣೆಗೆ ಹಾಜರಾಗಿರುತ್ತಾರೆ ಎಂದರೆ ಸರಿಯಲ್ಲ. ಬಸ್ ನಿಲ್ದಾಣದಿಂದ ಆರೋಪಿತರನ್ನು ವಶಕ್ಕೆ ಪಡೆದುಕೊಂಡಿರುತ್ತೇವೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮೇಲಾಧಿಕಾರಿಗಳ ಮಾತುಕೇಳಿ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ** ಇಲ್ಲ ಎಂದು ನುಡಿಯುತ್ತಾರೆ.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿದೆ

**(ಮಂಜುಳಾ ಇಟ್ಟಿ)**
**5ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ**
**ನ್ಯಾಯಾಲಯ, ಮಂಡ್ಯ**